# Meeting of Council of Foreign Ministers of SCO, Moscow (September 9-10, 2020)

September 08, 2020

---

**ಶಾಂಘೈ, ಮಾಸ್ಕೋದ ವಿದೇಶಾಂಗ ಸಚಿವರ  ಪರಿಷತ್ತಿನ ಸಭೆ (ಸೆಪ್ಟೆಂಬರ್ 9-10, 2020)**

ಸೆಪ್ಟೆಂಬರ್ 08, 2020

9-10 ಸೆಪ್ಟೆಂಬರ್, 2020 ರಂದು ಮಾಸ್ಕೋದಲ್ಲಿ ನಡೆಯಲಿರುವ ಶಾಂಘೈ ಸಹಕಾರ ಸಂಘಟನೆಯ ವಿದೇಶಾಂಗ ಸಚಿವರ ಪರಿಷತ್ತಿನ (ಸಿಎಫ್ಎಂ) ಸಭೆಯಲ್ಲಿ ವಿದೇಶಾಂಗ ಸಚಿವ ಡಾ.ಸುಬ್ರಹ್ಮಣ್ಯಂ ಜೈಶಂಕರ್  ರವರು ಭಾಗವಹಿಸಲಿದ್ದಾರೆ.

ಶಾಂಘೈನ ಪೂರ್ಣ ಸದಸ್ಯರಾಗಿ ಭಾರತ ಭಾಗವಹಿಸಲಿರುವ ಮೂರನೇ ಸಿಎಫ್ಎಂ ಸಭೆ ಇದಾಗಿದೆ. ಈ ಮೊದಲು ಎರಡು ಸಭೆಗಳು 23-24 ಏಪ್ರಿಲ್, 2018 ರಂದು ಬೀಜಿಂಗ್ (ಚೀನಾ) ಮತ್ತು ಬಿಶ್ಕೆಕ್ (ಕಿರ್ಗಿಜ್ ರಿಪಬ್ಲಿಕ್) ನಲ್ಲಿ 21-22 ಮೇ, 2019 ರಂದು ನಡೆದವು. ರಷ್ಯಾದ ಒಕ್ಕೂಟದ ಅಧ್ಯಕ್ಷತೆಯಲ್ಲಿ ಭಾರತ ವಿವಿಧ ಶಾಂಘೈ ಸಂವಾದ ಕಾರ್ಯವಿಧಾನಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದೆ. ಈ ವರ್ಷ.ಶಾಂಘೈ ಸಭೆ ಮುಂದಿನ ದಿನಗಳಲ್ಲಿ ನಡೆಯಲಿದೆ.

ಮಾಸ್ಕೋದಲ್ಲಿ ನಡೆಯುವ ಸಿಎಫ್ಎಂ ಸಭೆಯು ಮುಂಬರುವ ಶಾಂಘೈ ಸಭೆಯ ಸಿದ್ಧತೆಗಳನ್ನು ಪರಿಶೀಲಿಸುತ್ತದೆ ಮತ್ತು ಅಂತರರಾಷ್ಟ್ರೀಯ ಹಾಗೂ ಪ್ರಾದೇಶಿಕ ವಿಷಯಗಳ ಬಗ್ಗೆ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳುತ್ತದೆ.

ಮಾಸ್ಕೋದಲ್ಲಿ ವಿದೇಶಾಂಗ ಸಚಿವರ ಭೇಟಿಯು ಶಾಂಘೈ ವಿದೇಶಾಂಗ ಮಂತ್ರಿಗಳ ಕೌನ್ಸಿಲ್ ಮತ್ತು ಇತರ ದ್ವಿಪಕ್ಷೀಯ ಸಭೆಗಳಲ್ಲಿ ಭಾಗವಹಿಸುವುದನ್ನು ಒಳಗೊಂಡಿರುತ್ತದೆ.

**ನವ ದೆಹಲಿ**
**ಸೆಪ್ಟೆಂಬರ್ 08, 2020**

DISCLAIMER: This is an approximate translation. The original is available in English on MEA’s website and may be referred to as the official press release.